84

**ಶ್ರೀ ಗೋವಿಂದರಾಜು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಕರ್ನಾಟಕ ವಿಧಾನ ಪರಿಷತ್ತು ಇವರ ನಿಯಮ 72 ರಡಿ ಗಮನ ಸೆಳೆಯುವ ಸೂಚನೆಗೆ ಮಾಹಿತಿ.**

**ವಿಷಯ:**

ಕರ್ನಾಟಕದ ರೈತರು ಉತ್ತಮ ಮಳೆಯ ಹೊರತಾಗಿಯೂ ಗೊಬ್ಬರದ ತೀವ್ರ ಕೊರತೆಯನ್ನು ಎದುರಿಸುತ್ತಿದ್ದಾರೆ. ಯೂರಿಯಾ ಮತ್ತು ಡಿಎಪಿ ದರಗಳು ದ್ವಿಗುಣಗೊಂಡಿದ್ದು, ರೈತರು ದುಪ್ಪಟ್ಟು ಬೆಲೆ ಕೊಟ್ಟು ಗೊಬ್ಬರ ಖರೀದಿಸುವಂತಾಗಿದೆ. ಸಹಕಾರ ಸಂಘಗಳಲ್ಲಿ ಗೊಬ್ಬರಕ್ಕಾಗಿ ಉದ್ದದ ಸಾಲುಗಳು ಕಾಣಿಸುತ್ತಿವೆ. ರೈತರ ಆಕ್ರೋಶ ಹೆಚ್ಚುತ್ತಿದ್ದು, 'ಹಲ್ಲಿದ್ದರೆ ಕಡಲೆ ಇಲ್ಲ, ಕಡಲೆ ಇದ್ದರೆ ಹಲ್ಲಿಲ್ಲ' ಎಂಬ ನಾಣ್ಣುಡಿಯಂತಾಗಿದೆ ಕರ್ನಾಟಕದ ರೈತರ ಸ್ಥಿತಿ. ಈ ವರ್ಷ ರಾಜ್ಯದಾದ್ಯಂತ ಉತ್ತಮ ಮುಂಗಾರು ಮಳೆಯಾಗುತ್ತಿದ್ದು, ಬಿತ್ತನೆ ಕಾರ್ಯ ಆರಂಭವಾಗಿದೆ. ಆದರೆ, ರೈತರಿಗೆ ಗೊಬ್ಬರವೇ ಸಿಕ್ಕಿಲ್ಲ. ಸಿಗುತ್ತಿಲ್ಲ. ಮಳೆ ಬಂದಾಗ ಗೊಬ್ಬರ ಸಿಗುವುದಿಲ್ಲ, ಗೊಬ್ಬರ ಸಿಕ್ಕಾಗ ಮಳೆ ಬರುವುದಿಲ್ಲ ಎಂಬ ಸ್ಥಿತಿ ಎದುರಿಸುತ್ತಿರುವ ರೈತರು, ಬೆಳಗ್ಗೆ 5 ಗಂಟೆಯಿಂದಲೇ ಸಹಕಾರ ಸಂಘಗಳ ಮುಂದೆ ರಸಗೊಬ್ಬರಕ್ಕಾಗಿ ಸರದಿಯಲ್ಲಿ ನಿಲ್ಲುವಂತ ಪರಿಸ್ಥಿತಿ ಎದುರಾಗಿದ್ದು ಈ ಸಮಸ್ಯೆ ಬಗೆ ಹರಿಸಲು ಮಾನ್ಯ ಕೃಷಿ ಸಚಿವರ ಗಮನಸೆಳೆಯಲು ಬಯಸುತ್ತೇನೆ.

**ಉತ್ತರ:**

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಈ ಕೆಳಕಂಡ ಕಾರಣಗಳಿಂದ ರಸಗೊಬ್ಬರದ ಕೊರತೆಯಾಗಿರುತ್ತದೆ:

- ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಮುಂಚಿತವಾಗಿ ಉತ್ತಮವಾಗಿ ಮಳೆಯಾಗಿದ್ದು, ಸಾಮಾನ್ಯ ಅವಧಿಗಿಂತ ಮುಂಚೆ ಬಿತ್ತನೆ ಪ್ರಾರಂಭವಾಗಿರುವುದರಿಂದ,
- ಹೆಚ್ಚು ರಸಗೊಬ್ಬರ ಅವಶ್ಯವಿರುವ ಮುಸುಕಿನ ಜೋಳದ ವಿಸ್ತೀರ್ಣವು ಗಣನೀಯವಾಗಿ ಹೆಚ್ಚಳವಾಗಿರುತ್ತದೆ (ಅಂದಾಜು 2.00ಲಕ್ಷ ಹೆಕ್ಟೇರ್)
- ಅಂದಾಜು 13,000 ಹೆಕ್ಟೇರ್ ಪ್ರದೇಶದಲ್ಲಿ ಮರುಬಿತ್ತನೆ ಕೈಗೊಳ್ಳಲಾಗಿರುತ್ತದೆ.
- ಪ್ರಮುಖ ಜಲಾಶಯಗಳಿಂದ (ತುಂಗಭದ್ರಾ, ಕೃಷ್ಣಾ, ಕಾವೇರಿ ಇತ್ಯಾದಿ) ಅವಧಿಗಿಂತ ಮುಂಚಿತವಾಗಿ ಅಚ್ಚುಕಟ್ಟು ಪ್ರದೇಶಗಳಿಗೆ ನೀರನ್ನು ಬಿಟ್ಟಿರುವುದರಿಂದ ಮುಂಚಿತವಾಗಿ ನಾಟಿ ಕೈಗೊಳ್ಳಲಾಗಿರುತ್ತದೆ.

- ಕೇಂದ್ರ ಸರ್ಕಾರದಿಂದ ಪ್ರತಿ ಮಾಹೆಯ ಬೇಡಿಕೆ/ಹಂಚಿಕೆಗನುಗುಣವಾಗಿ ರಸಗೊಬ್ಬರಗಳು ಸರಬರಾಜಾಗಿರುವುದಿಲ್ಲ.

ಪ್ರಸ್ತುತ ರಾಜ್ಯದಲ್ಲಿ ಯೂರಿಯಾ ರಸಗೊಬ್ಬರವನ್ನು ಹೊರತು ಪಡಿಸಿ ಬೇರೆ ಯಾವುದೇ ರಸಗೊಬ್ಬರಗಳ ಕೊರತೆಯಾಗಿರುವುದಿಲ್ಲ.

**ಡಿ.ಎ.ಪಿ ರಸಗೊಬ್ಬರ:**

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿಗೆ (ಏಪ್ರಿಲ್-2025 ರಿಂದ ಸೆಪ್ಟೆಂಬರ್ 2025ರವರೆಗೆ) 4.00 ಲಕ್ಷ ಮೆ.ಟನ್ ಡಿ.ಎ.ಪಿ ರಸಗೊಬ್ಬರದ ಬೇಡಿಕೆಯಿದ್ದು, ಏಪ್ರಿಲ್ 2025 ರಿಂದ ಜುಲೈ-2025ರವರೆಗೆ 3.10 ಲಕ್ಷ ಮೆ.ಟನ್ ಹಂಚಿಕೆಗೆ, ಇಲ್ಲಿಯವರೆಗೆ 2.39 ಲಕ್ಷ ಮೆ.ಟನ್ ಡಿ.ಎ.ಪಿ ರಸಗೊಬ್ಬರ ಸರಬರಾಜಾಗಿದ್ದು, ಆರಂಭಿಕ ಶಿಲ್ಕು-0.76 ಲಕ್ಷ ಮೆ.ಟನ್ ಸೇರಿ 2.49 ಲಕ್ಷ ಮೆ.ಟನ್ ಮಾರಾಟವಾಗಿ, 0.67 ಲಕ್ಷ ಮೆ.ಟನ್ ದಾಸ್ತಾನಿರುತ್ತದೆ. ಒಟ್ಟು 0.71 ಲಕ್ಷ ಮೆ.ಟನ್ ರಸಗೊಬ್ಬರದ ಸರಬರಾಜಿಗೆ ಬಾಕಿ ಇರುತ್ತದೆ.

ಆಗಸ್ಟ್-2025ರ ಮಾಹೆಗೆ 0.78 ಲಕ್ಷ ಮೆ.ಟನ್ ಡಿ.ಎ.ಪಿ ರಸಗೊಬ್ಬರದ ಹಂಚಿಕೆಗೆ, ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ 0.21 ಲಕ್ಷ ಮೆ.ಟನ್ ಸರಬರಾಜಾಗಿದ್ದು, ಪ್ರಸ್ತುತ ಮಾಹೆಗೆ ಕೇಂದ್ರ ಸರ್ಕಾರದಿಂದ ಇನ್ನೂ 0.57 ಲಕ್ಷ ಮೆ.ಟನ್ ಸರಬರಾಜು ಬಾಕಿ ಇರುತ್ತದೆ. ಡಿ.ಎ.ಪಿ ರಸಗೊಬ್ಬರ ಸರಬರಾಜು ಪ್ರಕ್ರಿಯೆ ಜಾರಿಯಲ್ಲಿದ್ದು, ಸದ್ಯದಲ್ಲಿ ಯಾವುದೇ ಕೊರತೆ ಇರುವುದಿಲ್ಲ.

ಮೇ ಮತ್ತು ಜೂನ್ ಮಾಹೆಗಳಲ್ಲಿ ಬೇಡಿಕೆ ಅಥವಾ ಹಂಚಿಕೆಗೆ ಅನುಗುಣವಾಗಿ ಡಿ.ಎ.ಪಿ ರಸಗೊಬ್ಬರ ಸರಬರಾಜಾಗದ ಕಾರಣ ಮುಂಗಾರು ಬಿತ್ತನೆ ಸಮಯದಲ್ಲಿ ಕೆಲವು ಜಿಲ್ಲೆಗಳಲ್ಲಿ ಡಿ.ಎ.ಪಿ ರಸಗೊಬ್ಬರದ ಕೊರತೆ ಉಂಟಾಗಿತ್ತು. ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಕಾಂಪ್ಲೆಕ್ಸ್ ರಸಗೊಬ್ಬರವನ್ನು ಬಳಸಲು ರೈತರಲ್ಲಿ ವ್ಯಾಪಕ ಪ್ರಚಾರವನ್ನು ನೀಡಿ ಡಿ.ಎ.ಪಿ ರಸಗೊಬ್ಬರದ ಕೊರತೆಯನ್ನು ನಿಭಾಯಿಸಲಾಯಿತು.

**ಯೂರಿಯಾ ರಸಗೊಬ್ಬರ:**

ರಾಜ್ಯಕ್ಕೆ ಪ್ರಸಕ್ತ ಮುಂಗಾರು ಹಂಗಾಮಿಗೆ 12.95 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಬೇಡಿಕೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದಿಂದ 11.17 ಲಕ್ಷ ಮೆ.ಟನ್ (ಏಪ್ರಿಲ್-2025 ರಿಂದ ಸೆಪ್ಟೆಂಬರ್-2025ರವರೆಗೆ) ಯೂರಿಯಾ ರಸಗೊಬ್ಬರವನ್ನು ಹಂಚಿಕೆ ಮಾಡಲಾಗಿರುತ್ತದೆ. ಏಪ್ರಿಲ್ ಮಾಹೆಯಿಂದ ಜುಲೈ-2025ರ ಮಾಹೆಯವರೆಗೆ 6.82 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಹಂಚಿಕೆ ಇದ್ದು, ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ 5.55 ಲಕ್ಷ ಮೆ.ಟನ್ ಸರಬರಾಜಾಗಿದ್ದು (ಆರಂಭಿಕ ಶಿಲ್ಕು 3.46 ಲಕ್ಷ ಮೆ.ಟನ್ ದಿನಾಂಕ

01.4.2025ರಂತೆ), 7.90 ಲಕ್ಷ ಮೆ.ಟನ್ ಮಾರಾಟವಾಗಿ, 1.10 ಲಕ್ಷ ಮೆ.ಟನ್ ದಾಸ್ತಾನಿತ್ತು, ಜುಲೈ-25ರ ವರೆಗೆ ಕೇಂದ್ರ ಸರ್ಕಾರದ ಸರಬರಾಜಿನಲ್ಲಿ 1.27 ಲಕ್ಷ ಮೆ.ಟನ್ ಪ್ರಮಾಣದ ಯೂರಿಯಾ ರಸಗೊಬ್ಬರದ ಕೊರತೆಯಾಗಿರುತ್ತದೆ.

ಆಗಸ್ಟ್-2025ರ ಮಾಹೆಗೆ 2.23 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಹಂಚಿಕೆಗೆ, ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ 0.67 ಲಕ್ಷ ಮೆ.ಟನ್ ಸರಬರಾಜಾಗಿದ್ದು, ಪ್ರಸ್ತುತ ಮಾಹೆಗೆ ಕೇಂದ್ರ ಸರ್ಕಾರದಿಂದ ಇನ್ನೂ 1.56 ಲಕ್ಷ ಮೆ.ಟನ್ ಸರಬರಾಜು ಬಾಕಿ ಇರುತ್ತದೆ.

ಒಟ್ಟಾರೆ ಏಪ್ರಿಲ್ ಮಾಹೆಯಿಂದ ಆಗಸ್ಟ್-2025 ಮಾಹೆಯ ಅಂತ್ಯದವರೆಗೆ 2.83 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಸರಬರಾಜಿಗೆ ಬಾಕಿ ಇರುತ್ತದೆ.

**ರಸಗೊಬ್ಬರದ ಸಮಸ್ಯೆಯನ್ನು ಬಗೆಹರಿಸಲು ಕೈಗೊಂಡಿರುವ ಕ್ರಮಗಳು:**

- ಸನ್ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಕೃಷಿ ಸಚಿವರಿಂದ ರಾಜ್ಯದ ಯೂರಿಯಾ ರಸಗೊಬ್ಬರದ ಬೇಡಿಕೆಗನುಗುಣವಾಗಿ ಪೂರೈಕೆ ಮಾಡಲು ಕೋರಿ ಕೇಂದ್ರ ಸರ್ಕಾರದ ರಸಗೊಬ್ಬರ ಸಚಿವರಿಗೆ ಮನವಿಯನ್ನು ಸಲ್ಲಿಸಲಾಗಿದೆ.
- ಬೇಡಿಕೆಗನುಗುಣವಾಗಿ ರಾಜ್ಯಕ್ಕೆ ಯೂರಿಯಾ ರಸಗೊಬ್ಬರವನ್ನು ಸರಬರಾಜು ಮಾಡಲು ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರಗಳನ್ನು ಸಲ್ಲಿಸಲಾಗಿದೆ.
- ಕೃಷಿಗೆ ಬಳಸುತ್ತಿರುವ ಸಹಾಯಧನದ ಯೂರಿಯಾ ರಸಗೊಬ್ಬರವನ್ನು ಕೃಷಿಯೇತರ ಚಟುವಟಿಕೆಗಳಿಗೆ ಬಳಕೆಯಾಗುವುದನ್ನು ತಡೆಯಲು ಜಿಲ್ಲಾ ಮಟ್ಟದಲ್ಲಿ ಕೃಷಿ ಇಲಾಖೆ, ಪೊಲೀಸ್ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಕಂದಾಯ ಇಲಾಖೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ತಂಡಗಳನ್ನು ರಚಿಸಿ ಜಿಲ್ಲಾಧಿಕಾರಿಗಳಿಂದ ಆದೇಶ ಹೊರಡಿಸಲಾಗಿದೆ.
- ರಾಜ್ಯಾದ್ಯಂತ ದೂರದರ್ಶನ, ಕರಪತ್ರಗಳು, ದಿನಪತ್ರಿಕೆಯಲ್ಲಿ ಲೇಖನಗಳ ಮುಖಾಂತರ ಯೂರಿಯಾ ರಸಗೊಬ್ಬರದ ವಿವೇಚನಾತ್ಮಕ ಬಳಕೆ ಮತ್ತು ಯೂರಿಯಾ ರಸಗೊಬ್ಬರಕ್ಕೆ ಪರ್ಯಾಯವಾಗಿ ನ್ಯಾನೋ ಯೂರಿಯಾವನ್ನು ಮೇಲುಗೊಬ್ಬರವಾಗಿ ಬಳಕೆ ಮಾಡುವುದರ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- NFSM (ಆಹಾರ ಪೌಷ್ಠಿಕಾಂಶ ಭದ್ರತೆ ಯೋಜನೆಯಡಿ) ನ್ಯಾನೋ ಯೂರಿಯಾದ ಬಳಕೆಯನ್ನು ಉತ್ತೇಜಿಸಲು ರೈತರ ತಾಕುಗಳಲ್ಲಿ ಪ್ರಾತ್ಯಕ್ಷಿಕೆಯನ್ನು (demonstrations) ಕೈಗೊಳ್ಳಲಾಗುತ್ತಿದೆ.
- ಕೇಂದ್ರ ಸರ್ಕಾರದ ರಸಗೊಬ್ಬರ ಇಲಾಖೆಯ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ರಾಜ್ಯದ ಬೇಡಿಕೆಗನುಗುಣವಾಗಿ ಯೂರಿಯಾ ರಸಗೊಬ್ಬರದ ಪೂರೈಕೆಗೆ ಕ್ರಮವಹಿಸಲಾಗುತ್ತಿದೆ.

- ರಾಜ್ಯದಲ್ಲಿ ಎಲ್ಲಾ ರಸಗೊಬ್ಬರ ಮಾರಾಟಗಾರ ಮಳಿಗೆ/ಗೋದಾಮು, ಯೂರಿಯಾ ಬಳಸುವ ಕೈಗಾರಿಕೆಗಳನ್ನು ಪರಿಶೀಲಿಸುತ್ತಿದ್ದು, ಉಲ್ಲಂಘನೆಗಳು ಕಂಡುಬಂದಲ್ಲಿ ಜಪ್ತು ಮಾಡಲಾಗುತ್ತಿದೆ, ಪರವಾನಗಿಗಳನ್ನು ಅಮಾನತ್ತು/ರದ್ದು ಪಡಿಸಿ ಎಫ್. ಐ.ಆರ್ (FIR) ಗಳನ್ನು ದಾಖಲಿಸಲಾಗುತ್ತಿದೆ. ಕೃಷಿಯೇತರ ಚಟುವಟಿಕೆಗಳಿಗೆ ಯೂರಿಯಾ ರಸಗೊಬ್ಬರದ ಬಳಕೆಗೆ ಸಂಬಂಧಿಸಿದಂತೆ 6 (ಆರು) ಎಫ್.ಐ.ಆರ್ ಗಳನ್ನು ದಾಖಲಿಸಲಾಗಿರುತ್ತದೆ.
- ಪ್ರತಿದಿನ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಗೂಗಲ್ ಮೀಟ್ ಮೂಲಕ ರಸಗೊಬ್ಬರದ ಲಭ್ಯತೆ ಮತ್ತು ಬೇಡಿಕೆಯ ಬಗ್ಗೆ ಮಾಹಿತಿಯನ್ನು ಪಡೆದು, ಬೇಡಿಕೆಗನುಗುಣವಾಗಿ ಪೂರೈಕೆಗೆ ಕ್ರಮವಹಿಸಲಾಗುತ್ತಿದೆ.
- ಸನ್ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಕೃಷಿ ಸಚಿವರ ನಿರ್ದೇಶನದಂತೆ, ಕೃಷಿ, ಕಂದಾಯ ಮತ್ತು ಪೋಲೀಸ್ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಯೂರಿಯಾ ರಸಗೊಬ್ಬರದ ಅನಧಿಕೃತ ಶೇಖರಣೆ/ ಸಂಗ್ರಹಣೆ, ಕಾಳಸಂತೆಯಲ್ಲಿ/ಹೆಚ್ಚಿನ ದರಕ್ಕೆ ಮಾರಾಟದ ಬಗ್ಗೆ ಪರಿಶೀಲನೆಯನ್ನು ಕೈಗೊಳ್ಳುತ್ತಿದ್ದು, ಉಲ್ಲಂಘನೆ ಕಂಡು ಬಂದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ.
- ಎಲ್ಲಾ ರಸಗೊಬ್ಬರ ಮಾರಾಟಗಾರರಿಗೆ ಕಡ್ಡಾಯವಾಗಿ ಪ್ರತಿದಿನ ಮಳಿಗೆಯ ಮುಂದೆ ರಸಗೊಬ್ಬರದ ದಾಸ್ತಾನು ಮತ್ತು ಗರಿಷ್ಠ ಮಾರಾಟ ಬೆಲೆಯನ್ನು ಪ್ರದರ್ಶಿಸಲು ಮತ್ತು ಪಾಯಿಂಟ್ ಆಫ್ ಸೇಲ್ ಉಪಕರಣದ(PoS) ಮೂಲಕವೇ ಕಡ್ಡಾಯವಾಗಿ ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗಿದೆ.

**(ಎನ್.ಚಲುವರಾಯಸ್ವಾಮಿ)**
ಕೃಷಿ ಸಚಿವರು

ಸಂಖ್ಯೆ: AGRI/260/ACT/2025